## ದಾರೋಜಿಯ ಪ್ರಾಣಿ ಪ್ರತಿಮೆಗಳು

ಹಂಪಿಯ ಪಕ್ಕದಲ್ಲಿ ಇತ್ತೀಚೆಗೆ ಉದ್ಘಾಟನೆಗೊಂಡ ದಾರೋಜಿ ಕರಡಿಧಾಮದ ಒಳಗಿರುವ ಹುಲಿ, ಚಿರತೆ, ಕರಡಿಗಳ ಪ್ರತಿಮೆಗಳಿಗೆ ನೈಜ ಪ್ರಾಣಿಗಳ ಚರ್ಮವನ್ನು ಬಳಸಲಾಗಿದ್ದು ನೋಡಲು ಅಪ್ಪಟ ನೈಜ ಪ್ರಾಣಿಗಳಂತೆ ಕಾಣುತ್ತವೆ.

**-ಪ್ರೇಮ ಪಿ. ಕಾಯರ್ತಡ್ಕ, ಬೆಳ್ತಂಗಡಿ**





## ಬೊಂಬೆ ಹಬ್ಬಕ್ಕೆ ನಾವು ರೆಡಿ!

ಜ್ಯೂಸ್ ಕುಡಿದು ಬಿಸಾಕುವ 'ಸ್ಟ್ರಾ'ಗಳಿಂದ ಸಮವಸ್ತ್ರದೊಂದಿಗೆ ತಯಾರಾದ ಮುದ್ದಾದ ಬೊಂಬೆಗಳು ದಸರೆಯ ಬೊಂಬೆ ಹಬ್ಬಕ್ಕೆ ತಯಾರಾಗಿ ನಿಂತಿವೆ. ಆಸಕ್ತಿಯಿದ್ದಲ್ಲಿ ಕಸವೂ ಕೂಡ ಕಲಾಕೃತಿಯಾಗುತ್ತದೆ, ಅಲ್ಲವೇ?

**-ಸುಮತಿ ಟಿ.ಎನ್., ತಿಪಟೂರು**

---

## ಹೀಗೊಂದು ವನಮಹೋತ್ಸವ!

ಮಳೆಗಾಲ ಬಂದೊಡನೆ ಎಲ್ಲಾ ಕಡೆ ವನಮಹೋತ್ಸವದ ಆಚರಣೆ ಸಂಭ್ರಮದಿಂದ ನಡೆಯುತ್ತದೆ. ಗಿಡ ನೆಟ್ಟು ಕ್ಯಾಮೆರಾಗೆ ಪೋಸು ನೀಡಿ ಪ್ರಚಾರ ಪಡೆಯುವವರದ್ದೇ ದರ್ಬಾರ್. ಆದರೆ ನಮ್ಮ ಹಿತ್ತಿಲಿನಲ್ಲಿರುವ ಈ ನುಗ್ಗೇಕಾಯಿ ಮರ ತನ್ನದೇ ರೀತಿಯಲ್ಲಿ ವನಮಹೋತ್ಸವ ಆಚರಿಸಿಕೊಂಡಿದೆ. ಬೇಸಿಗೆಯಲ್ಲಿ ಬಿಟ್ಟ ಕಾಯೊಂದು ಮರದಲ್ಲೇ ಒಣಗಿ ಮಳೆಗಾಲ ಬಂದೊಡನೆ ಸೀಳು ಬಿಟ್ಟಿತು. ನೋಡಿದರೆ ಒಳಗಿರುವ ಸಾಲು ಬೀಜಗಳು ಗಿಡಗಳಾಗಿ ಚಿಗುರಿದ್ದವು. ಇದಲ್ಲವೇ ನಿಜವಾದ ವನಮಹೋತ್ಸವ!

**-ಜಯಾ ಯಾಜಿ, ಶಿರಾಲಿ**

